ನಿಯಮಗಳ ಪ್ರಕಾರ ಶರಾಬು ಅಂಗಡಿ, ಸಿಎಲ್-2, ಸಿಎಲ್-9 ಪರವಾನಿಗೆಗಳನ್ನು ಕೊಡಲು ಅಡ್ಡಿ ಬರುವುದಿಲ್ಲ.

ಇ) ಮೇಲ್ಕಂಡ ಉತ್ತರದಿಂದಾಗಿ ಸದರಿ ಪ್ರಶ್ನೆ ಉದ್ಭವಿಸುವುದಿಲ್ಲ.

ಅನಗವಾಡಿ ಸೇತುವೆ ಮುಳುಗಡೆ

84 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1996ರ ಜೂನ್ ತಿಂಗಳಿನಲ್ಲಿ ಅಲ್‌ಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಬೀಳಗಿ ತಾಲೂಕಿನ ಅನಗವಾಡಿ ಸೇತುವೆ ಸಂಪೂರ್ಣವಾಗಿ ಮುಳುಗಡೆಯಾಗುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನಗವಾಡಿ ಸೇತುವೆ ಜಿಲ್ಲೆಯ ಪ್ರಮುಖ ಸೇತುವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಈ ಸೇತುವೆ ಕಾಮಗಾರಿಯ ಬಗ್ಗೆ ಹೊಸದಾಗಿ ಕರೆದ ಟೆಂಡರ್ ಬಗ್ಗೆ ಅಂತಿಮ ತೀರ್ಮಾನವಾಗಿದೆಯೇ?

ಇ) ಹಾಗಿದ್ದಲ್ಲಿ ಅನಗವಾಡಿ ಸೇತುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು? ಹಾಗೂ ಈ ಸೇತುವೆಯ ಮೊದಲಿನ ವೆಚ್ಚವೆಷ್ಟು ಮತ್ತು ಈಗಿನ ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಸರ್ಕಾರದ ಗಮನಕ್ಕೆ ಬಂದಿದೆ ಟೆಂಡರ್ ತೀರ್ಮಾನದ ಹಂತದಲ್ಲಿದೆ.

ಇ) ಅಗನವಾಡಿ ಸೇತುವೆ ಕೆಲಸವನ್ನು ಸುಮಾರು ಒಂದೂವರೆ : ಎರಡು ತಿಂಗಳಲ್ಲಿ ಪ್ರಾರಂಭಿಸಲಾಗುವುದು. ಸೇತುವೆ ಅಂದಾಜು ವೆಚ್ಚ 1993-94ನೇ ಷೆಡ್ಯೂಲ್ಡ್ ರೇಟ್‌ನಂತೆ ರೂ. 10.75 ಕೋಟಿ ಅಂದಾಜಿನಲ್ಲಿ ಕೆಲವು ತಾಂತ್ರಿಕ ಮಾರ್ಪಾಡುಗಳನ್ನು ಮಾಡಲಾಗಿದ್ದು 1995-96ನೇ ಸಾಲಿನ ದರ ಪಟ್ಟಿಯಂತೆ ಇತ್ತೀಚಿನ ಅಂದಾಜು ವೆಚ್ಚ ರೂ. 22.23 ಕೋಟಿಗಳಾಗಿದೆ.

ಉಡುಪಿ ರಥ ಬೀದಿಗೆ ಹೆಚ್ಚುವರಿ ಪೊಲೀಸ್ ಠಾಣೆ

80 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಸ್ತು ಹಾಗೂ ಕಾನೂನು ಪಾಲನೆಯ ದೃಷ್ಟಿಯಲ್ಲಿ ಶ್ರೀ ಕೃಷ್ಣಮಠದ ನಿವೇಶನವಿರುವ ಉಡುಪಿ ರಥ ಬೀದಿಗೆ ಒಂದು ಹೆಚ್ಚುವರಿ ಪೋಲೀಸ್ ಠಾಣೆಯನ್ನು ಸ್ಥಾಪಿಸುವ ಆಲೋಚನೆ ಸರ್ಕಾರದವರಲ್ಲಿದೆಯೇ?

ಆ) ಹಾಗಿದ್ದಲ್ಲಿ ಪೋಲೀಸ್ ಠಾಣೆಯನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೃಷ್ಣಾ ಭಾಗ್ಯ ಜಲ ನಿಗಮದ ಬಗ್ಗೆ

72 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?